## ಯಂಲ್ಲಹಟ್ಟಿ ಬಾಂಧಾರ ನಿರ್ಮಾಣ

೧೨೪೭. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಯಲ್ಲಟ್ಟಿ ಗ್ರಾಮದ ಬಳಿ ಬಾಂಧಾರವೊಂದನ್ನು ನಿರ್ಮಿಸಲು ಇಲಾಖೆಯಿಂದ ಆಡಳಿತಾತ್ಮಕ ಮಂಜೂರಾತಿ ದೊರಕಿದೆಯೇ ಹಾಗಿದ್ದಲ್ಲಿ ಆವರ ಅಂದಾಜು ವೆಚ್ಚವೆಷ್ಟು ?

ಆ) ಈ ಬಾಂಧಾರ ನಿರ್ಮಾಣಕ್ಕೆ ಬೆಳಗಾವಿಯ ' ಕಾಡಾ ' ಅಧ್ಯಕ್ಷರಿಂದ ಅಡಿಗಲ್ಲು ಹಾಕಿಸಿದ್ದು ನಿಜವೇ.

ಇ) ಈವರೆಗೆ ಈ ಬಾಂಧಾರ ನಿರ್ಮಾಣಕ್ಕೆ ಆಗಿರುವ ವೆಚ್ಚ ಎಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು, ರೂ. ೧೮ ಲಕ್ಷಗಳು.

ಆ) ಇಲ್ಲ.

ಇ) ರೂ. ೦.೩೦ ಲಕ್ಷಗಳು.

## ತಾರಕಾ ಅಣೆಕಟ್ಟೆಯಲ್ಲಿ ನೀರನ್ನು ಬಿಟ್ಟಿರುವುದರ

೧೧೪೭. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರಕಾ ಅಣೆಕಟ್ಟಿನಲ್ಲಿ ತಾರೀಖು ೬-೧-೧೯೮೮ಕ್ಕೆ ಇದ್ದಂತಹ ನೀರಿನ ಪ್ರಮಾಣವೆಷ್ಟು ?

ಆ) ತಾರೀಖು ೬-೧-೧೯೮೮ಕ್ಕೆ ಇದ್ದಂತಹ ನೀರಿನ ಪ್ರಮಾಣವನ್ನರಿತು ಬೇಸಿಗೆ ಬೆಳೆಗೆ ನೀರನ್ನು ಬಿಡಲು ಸಾಧ್ಯವಿಲ್ಲವೆಂದು ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆಯೇ ?

ಇ) ನೀರು ಬಿಡುವುದು ಬೇಡವೆಂದು ನಿರ್ಣಯ ಮಾಡಿದ್ದರೂ ಸಹ ಫೆಬ್ರವರಿ ತಿಂಗಳ ಅಂತ್ಯದಲ್ಲಿ ಅಣೆಕಟ್ಟೆಯ ನೀರನ್ನೆಲ್ಲ ಖಾಲಿ ಮಾಡಿದ ಉದ್ದೇಶವೇನು ಹಾಗೂ ಇದರಿಂದ ರೈತರಿಗೆ ನಷ್ಟವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧.೦೦೯ ಟಿ.ಎಂ.ಸಿ.

ಆ) ಹೌದು.

ಇ) ಅಣೆಕಟ್ಟು ಗೇಟಿನ ಉಳಿಕೆ ದುರಸ್ತಿಗಾಗಿ. ಇಲ್ಲ.

## ಕಬಿನಿ ಎಡದಂಡೆ ನಾಲೆಯಲ್ಲಿ ಎರಡಂ ಬೆಳೆಗೆ ನೀರು ಬಿಡುವುದರ

೧೧೪೮. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಬಿನಿ ಜಲಾಶಯದ ಎಡದಂಡೆ ನಾಲೆಯ ಆಚ್ಚುಕಟ್ಟು ಪ್ರದೇಶವೆಷ್ಟು. ಇದು ಯಾವ ತಾಲ್ಲೂಕಿಗೆ ಸೀಮಿತವಾಗಿದೆ, ಈ ನಾಲೆಯಿಂದ ಯಾವ ಬೆಳೆಗೆ ನೀರು ಒದಗಿಸಲಾಗುತ್ತಿದೆ ಹಾಗೂ ಯಾವ ಪ್ರಮಾಣದಲ್ಲಿ ನೀರು ಬಿಡಲಾಗುತ್ತಿದೆ.

ಆ) ಈ ಆಚ್ಚುಕಟ್ಟು ಪ್ರದೇಶವು ಕಪ್ಪು ಮಣ್ಣಿನಿಂದ ಕೂಡಿದ್ದು ಎರಡು ಬಾರಿ ಭತ್ತದ ಬೆಳೆ ತೆಗೆಯಲು ಅವಕಾಶ ಕೊಡಬೇಕೆಂದು ರೈತರು ಕೋರಿರುವುದು ಸರ್ಕಾರದ ಗಮನದಲ್ಲಿದೆಯೇ ?